
ಪ್ರಬಂಧ

# ಪೊರೆ ಕಳಚಿತು

ಕುಮುದಾ ಪುರುಷೋತ್ತಮ್



"ಇಲ್ಲಿ... ಇತ್ತ... ನನ್ನ ಬಲಗಿವಿ ನೋಡೀಮ್ಮಾ."

ಹೀಗಂದಿದ್ದು ನನ್ನನ್ನು ಕಣ್ಣಿನ ಪರೀಕ್ಷೆಗೆ ಒಳಪಡಿಸಿದ ವೈದ್ಯರು. ಅಲ್ಲಾ! ಇವರ ಕಿವಿಯಲ್ಲೇನು ವಿಶೇಷ? ಹಳೆಯ ಸಿನಿಮಾ ಒಂದರ ರಾಜಕುಮಾರನಿಗಿದ್ದಂತೆ ಇವರ ಕಿವಿಯೂ ಕತ್ತೆಕಿವಿಯಾಗಿದೆಯೇ? ಹಿತ್ತಾಳೆ ಕಿವಿಯೇನೋ ಸಾರ್ವತ್ರಿಕ. ಆದರೆ ಕತ್ತೆಕಿವಿ? ಇವರ ಬಲಗಿವಿ ಇಂತಹ ಒಂದು ಅಪರೂಪದ ಕೇಸೇ? ಲಕ್ಷ್ಯಗೊಟ್ಟು ನೋಡಿದೆ. ಕತ್ತೆಕಿವಿಯ ಯಾವಲಕ್ಷಣಗಳೂ ಕಾಣಲಿಲ್ಲ. ಅಷ್ಟರಲ್ಲಿ ನನ್ನ ಕಣ್ಣಿನ ಮುಂದಿದ್ದ ಯಂತ್ರದ ಕಣ್ಣುಕೋರೈಸುವ ಬೆಳಕಿನಿಂದಾಗಿ ಏನೇನೂ ಕಾಣಿಸದಾಯಿತು. ತಪಾಸಣೆ ಮುಗಿಸಿದ